ದಿನಾಂಕ ಃ 19-09-2018 9 <u>ಓಎಸ್ ನಂ.121/2017 ರಲ್ಲಿ</u>

ಪಿಡಬ್ಲ್ಯೂ-1(ಉಮಾ ಶಂಕರ್)

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ ವಾದಿ ಪರ ವಕೀಲರಾದ ಶ್ರೀ ಎಂಆರ್ ಜಿ ರವರಿಂದಃ-</u>

1. ನಾನು ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

2. ರಿಟ್ ಅರ್ಜಿ ಸಂಖ್ಯೆ 30899/2014 ರಲ್ಲಿನ ಆದೇಶದ ನಕಲನ್ನು ನಿಪಿ-1 ಎಂದು, ದಿನಾಂಕ 20-01-2017 ರ ನೋಟೀಸನ್ನು ನಿಪಿ-2 ಎಂದು, ಅಂಚೆ ಕಛೇರಿಯವರು ನೀಡಿರುವ 4 ಧೃಡೀಕರಣ ಪತ್ರಗಳನ್ನು ನಿಪಿ-3 ರಿಂದ ನಿಪಿ-6 ಎಂದು, ಕಾರ್ಯಪಾಲಕ ಅಭಿಯಂತರರು ಬರೆದಿರುವ ಎರಡು ಪತ್ರಗಳನ್ನು ನಿಪಿ-7 ಮತ್ತು ನಿಪಿ-8 ಎಂದು, ಅಧೀಕ್ಷಕ ಅಭಿಯಂತರರು ಬರೆದಿರುವ ಒಂದು ಪತ್ರವನ್ನು ನಿಪಿ-9 ಎಂದು, ಸರ್ಕಾರದ ಕಾರ್ಯದರ್ಶಿಯವರಿಗೆ ಮುಖ್ಯ ಇಂಜಿನಿಯರ್ ರವರು ಬರೆದಿರುವ ಪತ್ರವನ್ನು ನಿಪಿ-10 ಮಂದು, ಸರ್ಕಾರದ ಕಾರ್ಯದರ್ಶಿಗಳು ಮುಖ್ಯ ಅಭಿಯಂತರರಿಗೆ ಬರೆದಿರುವ ಪತ್ರವನ್ನು ನಿಪಿ-11 ಎಂದು, ಮುಖ್ಯ ಇಂಜಿನಿಯರ್ ರವರು ಅಧೀಕ್ಷಕ ಇಂಜಿನಿಯರ್ ರವರಿಗೆ ಬರೆದಿರುವ ಪತ್ರವನ್ನು ನಿಪಿ-12 ಎಂದು, ಅಂಚೆ ರಸೀದಿಗಳ ನಕಲನ್ನು ನಿಪಿ-13 ಎಂದು, ವಾದಿ ಕಾರ್ಯಪಾಲಕ ಅಭಿಯಂತರರು ಇವರಿಗೆ ಬರೆದಿರುವ ಎರಡು ಪತ್ರಗಳನ್ನು ನಿಪಿ-14 ಮತ್ತು ನಿಪಿ-15 ಎಂದು, ಈ ಪತ್ರಕ್ಕೆ

ಸಂಬಂಧಪಟ್ಟ ಅಂಚೆ ರಸೀದಿಯನ್ನು ನಿಪಿ-16 ಎಂದು, ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಕೋರಿಕೆಯ ಮೇರೆಗೆ ಮುಂದೂಡಲಾಗಿದೆ.**

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಎಂ. ಅನಿತ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.